
# ತರಗತಿ 2

## ಸರಣಿ 2



समर्थक :

TATA WATER MISSION

हम समझदार

**ಕಲಿಕೆ**

ಶ್ರೀ ಲಕ್ಷ್ಮೀ ನಿವಾಸ, ನಿವೇಶನ ಸಂಖ್ಯೆ: 14 ಮತ್ತು 15
ಬಾಲಾಜಿ ಕಲ್ಯಾಣ ಮಂದಿರದ ಹಿಂಬಾಗ, ವನಕೇರಿ ಬಡಾವಣೆ,
ಯಾದಗಿರಿ – 585201, ದೂ. ಸಂ.: +91 8473250106

Kalike
TATA TRUSTS

ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೋರೇಶನ್ ಲಿಮಿಟೆಡ್ (ಹೆಚ್‌ಪಿಸಿಎಲ್), ಭಾರತ ಸರ್ಕಾರದ ನವರತ್ನ ಸಂಸ್ಥೆಗಳಲ್ಲಿ ಒಂದಾಗಿದ್ದು ದೇಶದಾದ್ಯಂತ ಪೆಟ್ರೋಲ್ ಉತ್ಪನ್ನಗಳ ಶುದ್ಧೀಕರಣ ಮತ್ತು ಮಾರಟದ ವ್ಯವಸ್ಥೆ ಮಾಡುತ್ತದೆ. ಹೆಚ್‌ಪಿಸಿಎಲ್ ಒಂದು ಸಾಮಾಜಿಕ ಜವಾಬ್ದಾರಿಯನ್ನು ಹೊಂದಿದ ಕಾರ್ಪೋರೇಟ್ ನಾಗರಿಕರ ರೂಪದಲ್ಲಿ ಶಿಕ್ಷಣ, ಆರೋಗ್ಯ, ಜೀವನೋಪಾಯ ಮತ್ತು ನೈರ್ಮಲ್ಯ, ಮುಂತಾದ ಕ್ಷೇತ್ರದಲ್ಲಿ ವಿಭಿನ್ನ ರೀತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ಇದು ದೇಶಾದ್ಯಂತ ಪ್ರಭಾವ ಬೀರಿದೆ.

ಸ್ವಚ್ಛತೆಯನ್ನು ಜೀವನದ ಕ್ರಮವನ್ನಾಗಿಸುವ ಉದ್ದೇಶದಿಂದ ಹೆಚ್‌ಪಿಸಿಎಲ್ ಸ್ವಚ್ಛ ಭಾರತ ಅಭಿಯಾನದಡಿಯಲ್ಲಿ ಸ್ವಚ್ಛತೆಗೆ ಸಂಬಂಧಿಸಿದ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು, ಅದರಲ್ಲಿ ಶಾಲಾ ಮತ್ತು ಸಮುದಾಯದಲ್ಲಿ ಶೌಚಾಲಯ ನಿರ್ಮಾಣ, ಹಳ್ಳಿ ಮತ್ತು ಶಾಲೆಗಳಲ್ಲಿ ಶುದ್ಧವಾದ ಕುಡಿಯುವ ನೀರಿನ ಪೂರೈಕೆ ಮತ್ತು ಸಮುದಾಯದಲ್ಲಿ ಸ್ವಚ್ಛತೆಯ ಮಹತ್ವವನ್ನು ಸಾರುವ ಮತ್ತು ಜಾಗೃತಿಯನ್ನು ಮೂಡಿಸುವ ಉದ್ದೇಶದಿಂದ ವಿವಿಧ ಸಂಘಸಂಸ್ಥೆಗಳ ಸಹಯೋಗದೊಂದಿಗೆ ಜನರ ಆಚರಣೆಯಲ್ಲಿ ಪರಿವರ್ತನೆಯನ್ನು ತರುವ ಉದ್ದೇಶದಿಂದ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.


ಹೆಚ್‌ಪಿಸಿಎಲ್, ಭಾರತದ ಒಂದು ಅಗ್ರಗಣ್ಯ ಸಾಮಾಜಿಕ ಸೇವಾ ಸಂಸ್ಥೆಯಾದ ಟಾಟಾ ಟ್ರಸ್ಟ್ಸ್ ನೊಂದಿಗೆ ಸಹಯೋಗ ಮಾಡಿಕೊಂಡಿದೆ. ಕಳೆದ ೧೨೫ ವರ್ಷಗಳಲ್ಲಿ ಟಾಟಾ ಟ್ರಸ್ಟ್ಸ್ ಲಕ್ಷಾಂತರ ಜನರ ಜೀವನದಲ್ಲಿ ಸುಧಾರಣೆಯನ್ನು ತಂದಿದೆ. ಟಾಟಾ ಟ್ರಸ್ಟ್ಸ್ ಆರೋಗ್ಯ ಮತ್ತು ಪೋಷಣೆ, ನೀರು, ನೈರ್ಮಲ್ಯ ಮತ್ತು ಶುಚಿತ್ವ, ವಿದ್ಯುಚ್ಛಕ್ತಿ, ಶಿಕ್ಷಣ, ಗ್ರಾಮೀಣಾಭಿವೃದ್ಧಿ, ನೈಸರ್ಗಿಕ ಸಂಪನ್ಮೂಲಗಳ ನಿರ್ವಹಣೆ, ನಾಗರಿಕ ಹಕ್ಕುಗಳ ರಕ್ಷಣೆ, ಮಾಧ್ಯಮ, ಕಲೆ, ಸಂಸ್ಕೃತಿ, ಶಿಲ್ಪಕಲೆ ಮತ್ತು ವಿವಿಧ ಉದ್ಯಮಗಳಲ್ಲಿ ತೊಡಗಿಸಿಕೊಂಡಿದೆ. ಶಾಲೆಗಳಲ್ಲಿ ನೀರು, ನೈರ್ಮಲ್ಯ ಮತ್ತು ಶುಚಿತ್ವಗಳ ನಿರ್ವಹಣೆಯಲ್ಲಿ ಸುಧಾರಣೆಯನ್ನು ತರುವುದೇ ಈ ಸಹಯೋಗದ ಉದ್ದೇಶ.

WASH (ನೀರು, ನೈರ್ಮಲ್ಯ ಮತ್ತು ಶುಚಿತ್ವ) ಯೋಜನೆಯು ಶಾಲಾ ಮಕ್ಕಳಲ್ಲಿ, ನೀರು, ನೈರ್ಮಲ್ಯ ಮತ್ತು ಶುಚಿತ್ವದ ನಿರ್ವಹಣೆಯಲ್ಲಿ ಸುಧಾರಣೆಯನ್ನು ತರುವ ನಿಟ್ಟಿನಲ್ಲಿ ಒಂದು ವಿನೂತನ ಪ್ರಯೋಗವಾಗಿದೆ. ಈ ಯೋಜನೆಯ ಮೂಲಕ, ಮಕ್ಕಳು ತಮ್ಮ ಮನೆ ಮತ್ತು ಸಮುದಾಯದಲ್ಲಿ ಸ್ವಚ್ಛತೆಯ ನಿರ್ವಹಣೆಯಲ್ಲಿ ಬದಲಾವಣೆ ತಂದು, ಅದು ಸಮಾಜದ ಮೇಲೂ ಪ್ರಭಾವ ಬೀರುವುದೆಂದು ಆಶಿಸಲಾಗಿದೆ. ಮಕ್ಕಳು, ಈ ಕಾರ್ಯಕ್ರಮದಲ್ಲಿ ತುಂಬಾ ಶ್ರದ್ಧೆಯಿಂದ ಭಾಗವಹಿಸಿ, ಈ ಕಾರ್ಯಕ್ರಮದ ಲಾಭ ಪಡೆಯುವರೆಂದು ನಮಗೆ ವಿಶ್ವಾಸ ಇದೆ. ಈ ಕಾರ್ಯಕ್ರಮ ಮಕ್ಕಳ ಮನಸ್ಸಿನಲ್ಲಿ ನೀರು, ನೈರ್ಮಲ್ಯ ಮತ್ತು ಶುಚಿತ್ವದ ಬೀಜವನ್ನು ಬಿತ್ತಿ, ಒಂದು ಜವಾಬ್ದಾರಿಯುತ ನಾಗರಿಕನ್ನಾಗಿಸಲು ಸಹಾಯವಾಗುವುದು.

ಬನ್ನಿ, ನಾವೆಲ್ಲರೂ ರಾಷ್ಟ್ರಪಿತ ಮಹಾತ್ಮಾ ಗಾಂಧಿ ಅವರ ಆಶಯವನ್ನು ನಮ್ಮದಾಗಿಸಿಕೊಂಡು ಸ್ವಚ್ಛ ಭಾರತದ ಕನಸನ್ನು ಸಾಕಾರಗೊಳಿಸುವಲ್ಲಿ ನಮ್ಮದಾದ ಒಂದು ಹೆಜ್ಜೆ ಇಡೋಣ!

# ಪಾಠ 1

# ನೀರು



ಜಲವೇ ಜೀವನ
ಮಳೆ ನೀರಿನ ಪ್ರಮುಖ ಮೂಲ
ಕೆರೆ, ನದಿ ಮತ್ತು ಕಾಲುವೆಯಿಂದ ಪಡೆದಿರುವ ನೀರು
ಕುಡಿಯಲು ಯೋಗ್ಯವಲ್ಲ



ವೈಯಕ್ತಿಕ ಶುಚಿತ್ವಕ್ಕಾಗಿ



ಕುಡಿಯುವ ನೀರಿಗಾಗಿ



ಬಟ್ಟೆ, ಇತ್ಯಾದಿ ತೊಳೆಯಲು

## ನೀರಿನ ಉಪಯೋಗ





ಆಹಾರ ತಯಾರಿಸಲು







ಮರ-ಗಿಡ ಮತ್ತು ಪ್ರಾಣಿ, ಪಕ್ಷಿಗಳ ಜೀವನಕ್ಕೂ ನೀರಿನ ಅವಶ್ಯಕತೆ ಇದೆ

# ಶಾಲೆಯಲ್ಲಿ ನೀರು

ಕುಡಿಯುವ ನೀರನ್ನು ಕೈಪಂಪು ಅಥವಾ
ನಳದಿಂದಲೇ ಪಡೆಯಿರಿ

ಶುದ್ಧ ಮತ್ತು ಸ್ವಚ್ಛ ನೀರನ್ನು ಕುಡಿಯಿರಿ

ಕುಡಿಯುವ ನೀರನ್ನು
ಮುಚ್ಚಿದ ಪಾತ್ರೆಯಲ್ಲಿ ಸಂಗ್ರಹ ಮಾಡಿ





ಕುಡಿಯುವ ನೀರನ್ನು ಸದಾ ಮುಚ್ಚಿದ ಪಾತ್ರೆ
ಅಥವಾ ಫಿಲ್ಟರ್‌ನಿಂದಲೇ ತೆಗೆದು ಕುಡಿಯಿರಿ

ಕುಡಿಯುವ ನೀರಿನಲ್ಲಿ ಬೆರಳನ್ನು ಮುಳುಗಿಸಬೇಡಿ

ಪಾತ್ರೆಯಿಂದ ಕುಡಿಯುವ ನೀರನ್ನು ತೆಗೆಯಲು
ಕೈಹಿಡಿ ಇರುವ ಲೋಟವನ್ನು ಬಳಸಿ


ನೀರನ್ನು ಪೋಲು ಮಾಡಬೇಡಿ

## ಶಾಲೆಯಲ್ಲಿ ನೀರು

ಅಡುಗೆ ಮಾಡಲು,
ಶೌಚಕ್ಕಾಗಿ,
ಕೈ ತೊಳೆಯಲು,
ಸ್ವಚ್ಛಗೊಳಿಸಲು
ಉಪಯೋಗವಾಗುತ್ತದೆ



# ಪಾಠ 2
# ಸ್ವಚ್ಛತೆ



ಬಯಲಲ್ಲಿ ಶೌಚ ಮಾಡಬಾರದು

ಬಯಲಲ್ಲಿ ಮಲ ಇರುವುದರಿಂದ
ಬಯಲಲ್ಲಿ ಮಲ ವಿಸರ್ಜನೆ ಮಾಡುವುದರಿಂದ
ರೋಗಗಳು ಹರಡುತ್ತವೆ

ಮನೆಯನ್ನು ಸ್ವಚ್ಛವಾಗಿಡಿ, ಊರನ್ನು ಸ್ವಚ್ಛವಾಗಿಡಿ, ಬಯಲಲ್ಲಿ ಶೌಚ ಮಾಡುವುದರಿಂದ ವಾತಾವರಣ ಕಲುಷಿತಗೊಳ್ಳುತ್ತದೆ.



ಶೌಚಾಲಯ ಬಳಸಿದ ಕೂಡಲೆ
ಕೈಯನ್ನು ಸಾಬೂನಿನಿಂದ ತೊಳೆಯಿರಿ

ಮಲ ಮತ್ತು ಮೂತ್ರ ವಿಸರ್ಜನೆಗೆ
ಶೌಚಾಲಯದ ಉಪಯೋಗ ಮಾಡಿ

ಶೌಚಾಲಯದ ಬಳಕೆಯ ನಂತರ
ಶೌಚ ಮಾಡಿದ ಸ್ಥಳದಲ್ಲಿ
ನೀರನ್ನು ಅವಶ್ಯವಾಗಿ ಹಾಕಿ





ಆಹಾರವನ್ನು ಸದಾ ಮುಚ್ಚಿ ಇಡಿ





ಸಾಮಾನು ತರಲು ಮತ್ತು ಕೊಂಡೊಯ್ಯಲು
ಪ್ಲಾಸ್ಟಿಕ್ ಚೀಲಗಳ ಬದಲು ಬಟ್ಟೆ ಚೀಲಗಳನ್ನು ಉಪಯೋಗಿಸಿ

# ಶಾಲೆಯಲ್ಲಿ ಸ್ವಚ್ಛತೆ




ಬಯಲಲ್ಲಿ ಶೌಚ ಮಾಡಬೇಡಿ, ಶೌಚಕ್ಕಾಗಿ ಸದಾ ಶೌಚಾಲಯವನ್ನು ಬಳಸಿ



ಕಸವನ್ನು ಕಸದ ಬುಟ್ಟಿಯಲ್ಲೇ ಹಾಕಿ



ಉಳಿದ ಮತ್ತು ಹಳಸಿದ ಆಹಾರವನ್ನು
ಗೊಬ್ಬರದ ಗುಂಡಿಯಲ್ಲಿ ಹಾಕಿ
(ಆಹಾರ ನಿರುಪಯುಕ್ತವಾಗದಂತೆ ಎಚ್ಚರ ವಹಿಸಿ)

# ಶೌಚಾಲಯ ಬಳಕೆಯ ಸರಿಯಾದ ವಿಧಾನ

1



ಶೌಚಾಲಯ ಬಳಕೆಯ ಮೊದಲು
ಶೌಚದ ಸ್ಥಳದಲ್ಲಿ ಸ್ವಲ್ಪ ನೀರು ಹಾಕಿ

2




ಶೌಚ ಮಾಡುವಾಗ ಕಾಲನ್ನು
ಸರಿಯಾದ ಕ್ರಮದಲ್ಲಿ ಇಟ್ಟುಕೊಳ್ಳಿ

3



ಚಿತ್ರದಲ್ಲಿ ತೋರಿಸಿದಂತೆ
ಶುಚಿಯಾಗಿ

4



ಶೌಚದ ನಂತರ ಸ್ಥಳವನ್ನು ಕೊಳಕಾದ
ಸ್ಥಿತಿಯಲ್ಲಿ ಇರಲು ಬಿಡಬೇಡಿ

5



ಮಲವನ್ನು ನೀರಿನಿಂದ ಹರಿಸಿ ಬಿಡಿ

6



ಶೌಚಾಲಯ ಬಳಕೆಯ ಕೂಡಲೆ
ಕೈಯನ್ನು ಸಾಬೂನಿನಿಂದ ತೊಳೆಯಿರಿ

7




ಶೌಚಾಲಯವನ್ನು ಸದಾ ಸ್ವಚ್ಛವಾಗಿಡಿ

# ವೈಯಕ್ತಿಕ ಶುಚಿತ್ವ



- ಶರೀರವನ್ನು ಸದಾ ಶುಚಿಯಾಗಿ ಹಾಗೂ ಸ್ವಚ್ಛವಾಗಿಡಿ
- ಬೆಳಗ್ಗೆ ಎದ್ದ ತಕ್ಷಣ ಕೈ ಮತ್ತು ಮುಖ ತೊಳೆಯಿರಿ
- ಪ್ರತಿದಿನ ಬ್ರಶ್ ಬಳಸಿ ಹಲ್ಲುಜ್ಜಿ
- ಪ್ರತಿದಿನ ಸ್ನಾನ ಮಾಡಿ
- ಪ್ರತಿ ದಿನ ಸ್ವಚ್ಛವಾಗಿರುವ ಬಟ್ಟೆಯನ್ನು ಧರಿಸಿ
- ಪ್ರತಿದಿನ ತಲೆ ಬಾಚಿಕೊಳ್ಳಿ
- ಹೊರಗಡೆ ಹೋದಾಗ ಅವಶ್ಯವಾಗಿ ಪಾದರಕ್ಷೆಯನ್ನು ಬಳಸಿ
- ಊಟದ ಮೊದಲು ಮತ್ತು ಶೌಚದ ನಂತರ ಕೈಯನ್ನು ತೊಳೆಯಲು ಸಾಬೂನು ಬಳಸಿ
- ಕೈಯನ್ನು ತೊಳೆಯಲು ಸಾಬೂನನ್ನು ಉಪಯೋಗಿಸಿ
- ಕೈಯನ್ನು ತೊಳೆದ ಮೇಲೆ ಕೈಯನ್ನು ಗಾಳಿಯಲ್ಲಿ ಒಣಗಿಸಿ ಅಥವಾ ನಿಮ್ಮಲ್ಲಿರುವ ಸ್ವಚ್ಛ ಬಟ್ಟೆಯಿಂದ ಒರೆಸಿ
- ವಾರದಲ್ಲಿ ಒಂದು ದಿನ ಉಗುರು ಕತ್ತರಿಸಿ
- ಕಿವಿ, ಮೂಗು ಮತ್ತು ಮುಖದ ಮೇಲೆ ಬೆರಳು ಇಡಬೇಡಿ
- ನಮ್ಮನ್ನು ನಾವು ಶುಚಿಯಾಗಿಟ್ಟರೆ ನಾವು ಕಾಯಿಲೆಗಳಿಗೆ ಒಳಗಾಗುವುದಿಲ್ಲ
- ಗಿಡ, ಮರ ಮತ್ತು ಗೋಡೆಯ ಮೇಲೆ ಬಟ್ಟೆ ಒಣಗಿಸಬೇಡಿ
















# ಶಾಲೆಯಲ್ಲಿ ಶುಚಿತ್ವ

- ಮಲ ಮತ್ತು ಮೂತ್ರ ವಿಸರ್ಜನೆಗೆ ಶೌಚಾಲಯವನ್ನು ಬಳಸಿ
- ಶೌಚಾಲಯ ಬಳಕೆಯಾದ ಮೇಲೆ ಶೌಚ ಸ್ಥಳಕ್ಕೆ ನೀರನ್ನು ಹಾಕಿ ಶುಚಿಗೊಳಿಸಿ
- ಶೌಚಾಲಯ ಸ್ವಚ್ಛವಾಗಿಡಿ
- ಶೌಚಾಲಯವನ್ನು ಉಪಯೋಗಿಸಿದ ತಕ್ಷಣ ಕೈಯನ್ನು ಅವಶ್ಯವಾಗಿ ಸಾಬೂನಿನಿಂದ ತೊಳೆಯಿರಿ
- ಊಟದ ಮೊದಲು ಕೈಯನ್ನು ಸಾಬೂನಿನಿಂದ ತೊಳೆಯಿರಿ
- ಶಾಲೆಯಲ್ಲಿ ಅಲ್ಲಿ-ಇಲ್ಲಿ ಕಸ ಎಸೆಯಬೇಡಿ
- ತರಗತಿಯಲ್ಲಿ ಕಸದ ಡಬ್ಬಿಯನ್ನು ಬಳಸಿ
- ನಮ್ಮ ಶಾಲೆ ಮತ್ತು ತರಗತಿಯನ್ನು ಸ್ವಚ್ಛವಾಗಿಡಿ
- ಉಳಿದಿರುವ ಎಂಜಲು ಪದಾರ್ಥವನ್ನು ಗೊಬ್ಬರದ ಗುಂಡಿ ಅಥವಾ ಕಸದ ತೊಟ್ಟಿಯಲ್ಲೇ ಹಾಕಿ





# ಕೈ ತೊಳೆಯುವ ಸರಿಯಾದ ವಿಧಾನ




ಎರಡೂ ಕೈಗಳನ್ನು ಚಿತ್ರದಲ್ಲಿ ತೋರಿಸಿದಂತಗೆ ನೀರಿನಿಂದ ಒದ್ದೆ ಮಾಡಿಕೊಳ್ಳಿ




ಕೈಗಳಿಗೆ ಸಾಬೂನು ಹಚ್ಚಿಕೊಳ್ಳಿ




ಕೈಗಳನ್ನು ಚೆನ್ನಾಗಿ ಉಜ್ಜಿಕೊಳ್ಳಿ





ಬೆರಳುಗಳ ಸಂದಿ ಮತ್ತು ಉಗುರುಗಳನ್ನು ಉಜ್ಜಿಕೊಳ್ಳಿ




ಬೆರಳುಗಳ ತುದಿ ಮತ್ತು ಉಗುರುಗಳನ್ನು ಉಜ್ಜಿಕೊಳ್ಳಿ




ನೀರಿನಿಂದ ಕೈ ತೊಳೆಯಿರಿ




ಎರಡು ಕೈಗಳನ್ನು ಸ್ವಲ್ಪ ಹೊತ್ತು ಹಾಗೆ ಗಾಳಿಗೆ ಒಣಗಿಸಿ ಅಥವಾ ಸ್ವಚ್ಛವಾದ ಬಟ್ಟೆಯಿಂದ ಕೈ ಒರೆಸಿಕೊಳ್ಳಿ




समर्थक :

TATA WATER MISSION
A TATA TRUSTS INITIATIVE

हम समझदार

Kalike
An Initiative of TATA TRUSTS